ಆಶ್ಚರ್ಯದಿಂದ ನಾನು ಅವಳತ್ತ ನೋಡಿದೆ.

'ಏಕೆ ಗಾಬರಿಯಾಗ್ತೀರಿ. ನಮಗೆ ಸ್ವಾತಿಯ ಮನೆಗೆ ಹೋಗಬೇಕಲ್ಲವೆ?'

ಹೌದಲ್ವೆ? ನಾನು ಇಷ್ಟುದಿನ ಸ್ವಾತಿಯ ಮನೆಗೆ ಹೋಗುವುದನ್ನೇ ಮರೆತು ಹೋಗಿದ್ದೆ.

'ಹೌದೌದು' ನಾನಂದೆ. ತಕ್ಷಣ ಹೊಳೆಯಿತು.

ಸ್ವಾತಿಯ ಮನೆಗೆ ಹೋಗುವ ವಿಷಯ ಇವಳಿಗೆ ಯಾರು ಹೇಳಿದರು.

ಅವಳಿಗೆ ನನ್ನ ಸಮಸ್ಯೆ ಅರ್ಥವಾಗಿರಬೇಕು. ಅವಳೇ ಸ್ಪಷ್ಟೀಕರಣ ನೀಡಿದಳು.

'ಇವತ್ತು ಸ್ವಾತಿ ಬಂದು ಹೇಳಿ ಹೋದಳು. ನಿನ್ನೆನೂ ಬಂದಿದ್ದಳಂತೆ. ಬಾಗಿಲಿಗೆ ಹಾಕಿದ ಕೀಲಿ ನೋಡಿ ಹೊರಟು ಹೋಗಿದ್ದಳಂತೆ.'

ರೇವತಿ ಎದ್ದು ಕೈ ತೊಳೆಯಲು ಹೋದಳು.

## ಚಂದ್ರಕಾಂತ ಕೇಣಿ

ಮೂಲತಃ ಗೋವೆಯ ಚಂದ್ರಕಾಂತ ಕೇಣಿ ಕೊಂಕಣಿ ಕಥಾಲೇಖಕರಲ್ಲಿ ಅಗ್ರಗಣ್ಯರು. ಹಿರಿಯ ಸ್ವಾತಂತ್ರ್ಯ ಯೋಧ, ಸಾಮಾಜಿಕ ಕಾರ್ಯಕರ್ತ ಕಾಕಾ ಕಾಲೇಲ್‌ಕರರ ಗರಡಿಯಲ್ಲಿ ಪಳಗಿ ಕಾಲೇಲ್‌ಕರರು ಹೊರಡಿಸುತ್ತಿದ್ದ ಹಿಂದೀ ಪತ್ರಿಕೆಯ ಸಂಪಾದಕೀಯ ಕಾರ್ಯದಲ್ಲಿ ನೆರವಾಗುತ್ತಿದ್ದರು. ಕೆಲವು ಕಾಲ ಮುಂಬಯಿಯಲ್ಲಿ, ಗೋವಾ ಸ್ವತಂತ್ರವಾದ ಬಳಿಕ ಗೋವೆಗೆ ಬಂದು 'ರಾಷ್ಟ್ರಮತ' ಎಂಬ ದೈನಿಕ ಆರಂಭಿಸಿ, ಸಂಪಾದಕರಾಗಿ 35 ವರ್ಷ ನಡೆಸಿದರು. ಅದೇ ಕಾಲಕ್ಕೆ ಇಂಗ್ಲಿಷ್, ಹಿಂದಿ, ಗುಜರಾತಿ, ಕೊಂಕಣಿ ಪತ್ರಿಕೆಗಳಿಗೂ ಲೇಖನ ಬರೆಯುತ್ತಿದ್ದರು. ಅವರು 'ಸಾರಸ್ವತ' ಎಂಬ ಇಂಗ್ಲಿಷ್ ಪತ್ರಿಕೆಗೂ ಸಂಪಾದಕರಾಗಿದ್ದರು.

ಕಾದಂಬರಿ, ಪ್ರಬಂಧ, ಅನುವಾದ, ಅಂಕಣ ಬರಹ, ಸಂಶೋಧನೆಯ ಕ್ಷೇತ್ರಗಳಲ್ಲಿ ಕೃಷಿ ಮಾಡಿದ್ದರೂ ಕಥಾಕ್ಷೇತ್ರದಲ್ಲಿ ವಿಪುಲ ಸಾಹಿತ್ಯ ನಿರ್ಮಿಸಿದ್ದಾರೆ. 'ವ್ಹಕಲ ಪಾವಣಿ' ಎಂಬ ಕಥಾಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿದೆ (1988). ಇಲ್ಲಿ ಅನುವಾದಗೊಂಡ ಕಥೆ ಅದೇ ಸಂಗ್ರಹದ್ದು.

## ಶಾ.ಮಂ. ಕೃಷ್ಣರಾಯ

ಮೂಲತಃ ಉತ್ತರ ಕನ್ನಡ ಜಿಲ್ಲೆಯ ಅಂಕೋಲೆಯವರಾದ ಶಾ.ಮಂ. ಕೃಷ್ಣರಾಯರು ನಾಟಕ, ಕತೆ, ಮಕ್ಕಳ ಸಾಹಿತ್ಯ, ಪ್ರವಾಸ ಕಥನ, ವ್ಯಕ್ತಿಚಿತ್ರ, ಜೀವನ ಚರಿತ್ರೆ, ಸಂಪಾದನೆ ಹಾಗೂ ಅನುವಾದ ಪ್ರಕಾರಗಳಲ್ಲಿ 90ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವರು ಕೊಂಕಣಿ, ಮರಾಠೀ ಭಾಷೆಗಳ ಕೆಲವು ಅತ್ಯುತ್ತಮ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಆಪ್ತ ವಲಯದಲ್ಲಿ ಶಾ.ಮಂ. ಎಂದೇ ಗುರುತಿಸಿಕೊಳ್ಳುವ ಕೃಷ್ಣರಾಯರಿಗೆ ಕನ್ನಡದ ಪ್ರಸಿದ್ಧ ಲೇಖಕರಾದ ಅ.ನ.ಕೃ., ತ.ರಾ.ಸು., ಬೀಚಿ ಅವರೊಂದಿಗೆ ದೀರ್ಘ ಕಾಲದ ಆಪ್ತ ಒಡನಾಟವಿತ್ತು.

ಶಾ.ಮಂ. ಹುಟ್ಟಿದ್ದು ಬೆಳಗಾವಿಯಲ್ಲಿ. ತಮ್ಮ ಶಾಲಾ ಶಿಕ್ಷಣವನ್ನು ಶಿರಸಿ, ಸಿದ್ದಾಪುರದಲ್ಲಿ ನಡೆಸಿ, ಮೈಸೂರು ವಿಶ್ವವಿದ್ಯಾಲಯದ ಬಿ.ಎಡ್., ಎಂ.ಎ. ಪದವಿ ಪಡೆದು ದಶಕಗಳ ಕಾಲ ಗೋವೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ಅಲ್ಪಾವಧಿಗೆ ಪತ್ರಿಕೆಗಳ ಸಂಪಾದಕರಾಗಿಯೂ ದುಡಿದಿದ್ದಾರೆ.